ಒಂದು ಎರಡು ಲಾರಿಗಳನ್ನು ಅಲ್ಲಿ ಸೇರಿದ್ದವರು ಮುತ್ತಿಗೆ ಹಾಕಿದಾಗ ಲಘುವಾಗಿ ಲಾಠಿ ಪ್ರಯೋಗ ಮಾಡಿದರು. ಇದು ತುಮಕೂರು, ಕೋಲಾರ ಕ್ಯಾಂಪ್ ಹತ್ತಿರ ನಡೆಯಿತು. ಸಧ್ಯಕ್ಕೆ ಗಂಭೀರ ಪರಿಸ್ಥಿತಿಯಾಗುವುದು ತಪ್ಪಿತು. ಆದರೂ ಅರ್ಧದಷ್ಟು ಆಹ್ವಾನಿತರು ಹಸಿದು ವಾಪಸ್ಸಾದರು. ಆದರೆ ಸರಕಾರಕ್ಕೆ ಜನತೆಗೆ ಮೋಸ ಮಾಡಲು ಕಂಟ್ರಾಕ್ಟರ್‌ಗಳಾದ, ಕಾವೇರಿ ಕಾಂಟಿನೆಂಟಲ್ ಮತ್ತು ಏರ್‌ಲೈನ್ಸ್ ಹೋಟೆಲ್ ಮಾಲೀಕರು ೨೦,೦೦೦ ಟಾಲಿ ಪ್ಯಾಕೆಟ್‌ಗಳನ್ನು ತಂದು ಲೆಕ್ಕ ಒದಗಿಸಲು ಪ್ರಯತ್ನ ಪಟ್ಟಿದ್ದನ್ನು ಅಲ್ಲಿದ್ದ ಅಧಿಕಾರಿಗಳಾದ ಶ್ರೀಮತಿ ನೀರಜಾ ರಾಜಕುಮಾರ್ ಮತ್ತು ಸಂಜಯ್‌ಕೌಲ್‌ರವರು ಪತ್ತೆ ಹಚ್ಚಿದ್ದು ಶ್ಲಾಘನೀಯ. ಈ ರೀತಿ ದ್ರೋಹ ಮಾಡಿದ, ಮೋಸ ಮಾಡಿದ, ಹೋಟೆಲ್ ಪ್ರೊಪ್ರೈಟರ್‌ಗಳ ಮೇಲೆ ಏನು ತುರ್ತು ಕ್ರಮ ಕೈಗೊಂಡಿದ್ದೀರಿ ಎಂಬ ಈ ಸಮಸ್ಯೆಯನ್ನು ಸದನದ ಮುಖಾಂತರ ಗ್ರಾಮಾಭಿವೃದ್ಧಿ ಸಚಿವರ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ಕಾರ್ಮಿಕ ಸಚಿವರು).—ಈ ಬಗ್ಗೆ ವಿಚಾರಣೆ ಮಾಡಿ, ವಿವರಗಳನ್ನು ಪಡೆದುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

(ಳ) ಹೊನ್ನಾಳಿ ತಾಲ್ಲೂಕಿನ ಸಾಸಿವೆ ಹಳ್ಳಿಯಿಂದ ಸಿರಿಗೆರೆ ಮಾರ್ಗವಾಗಿ ರಾತ್ರಿವೇಳೆ ಬೆಂಗಳೂರಿಗೆ ಬಸ್ಸನ್ನು ಓಡಿಸುವುದು

ಶ್ರೀ ಡಿ.ಜಿ. ಬಸವನಗೌಡ.—ಮಾನ್ಯ ಅಧ್ಯಕ್ಷರೇ ಹೊನ್ನಾಳಿ ತಾಲ್ಲೂಕಿನ ಸಾಸಿವೆ ಹಳ್ಳಿಯಿಂದ ಬಸವಪಟ್ಟಣ ಸಂತೆಬೆನ್ನೂರು, ಸಿರಿಗೆರೆ ಚಿತ್ರದುರ್ಗ ಮಾರ್ಗವಾಗಿ ಬೆಂಗಳೂರಿಗೆ ರಾತ್ರಿವೇಳೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸನ್ನು ಓಡಿಸುವ ಬಗ್ಗೆ ಹೊನ್ನಾಳಿ ಮತ್ತು ಚೆನ್ನಗಿರಿ ತಾಲ್ಲೂಕಿನ ಪ್ರಯಾಣಿಕರು ಕೆಲವಾರು ದಶಕಗಳಿಂದ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದರೂ ಇದುವರೆವಿಗೂ ಬೇಡಿಕೆ ಈಡೇರದೇ ಇರುವ ಬಗ್ಗೆ ಸಾರಿಗೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸಾರಿಗೆ ಸಚಿವರಿಗೆ ವಿಷಯವನ್ನು ತಿಳಿಸಿ ಉತ್ತರ ತರಿಸಿಕೊಡುವ ವ್ಯವಸ್ಥೆ ಮಾಡಿಸುತ್ತೇನೆ.

(ಱ) ಮೈಸೂರಿನಲ್ಲಿರುವ ಟಿ.ವಿ. ಟ್ರಾನ್ಸ್‌ಮಿಟರ್‌ನ್ನು ೧೦ ಕಿಲೋವಾಟ್ಸ್‌ಗೆ ಏರಿಸುವುದು

ಶ್ರೀ ವೇದಾಂತ ಹಚ್ಮಿಗೆ.—ಮಾನ್ಯ ಅಧ್ಯಕ್ಷರೇ ಭಾರತ ಸರ್ಕಾರದ ಒನೇ ಯೋಜನೆಯಲ್ಲಿ ಶಿವಮೊಗ್ಗ ಮತ್ತು ಧಾರವಾಡಗಳಲ್ಲಿ ೧೦ ಕಿಲೋವಾಟ್ಸ್ ಟಿ.ವಿ. ಟ್ರಾನ್ಸ್‌ಮಿಟರ್‌ಗಳನ್ನು ಅಳವಡಿಸಲು ಕೇಂದ್ರ ಸರ್ಕಾರ ತೀರ್ಮಾನ ಕೈಗೊಂಡಿರುವುದಾಗಿ ಗೊತ್ತಾಗಿದೆ. ಈಗ ಮೈಸೂರು ನಗರದಲ್ಲಿರುವ ಟ್ರಾನ್ಸ್‌ಮಿಟರ್ ನಗರದ ಜನತೆಗೆ ಸರಿಯಾದ ರೀತಿಯಲ್ಲಿ ಪ್ರಸಾರ ಕಾರ್ಯದಲ್ಲಿ ಉಪಯೋಗವಾಗುತ್ತಿಲ್ಲ. ಕೇಂದ್ರ ಸರ್ಕಾರದ ವಾರ್ತಾ ಮತ್ತು ಪ್ರಸಾರ ಸಚಿವರಾದ ಶ್ರೀ ಆಜಿತ್ ಕುಮಾರ್ ಪೂಂಜರವರು ಮಡಿಕೇರಿಯಲ್ಲಿ ಕಳೆದ ತಿಂಗಳು ಕೊನೆಯಲ್ಲಿ ಎಲ್.ಪಿ.ಟಿ. ಟಿ.ವಿ. ಸ್ಟೇಷನ್ ತೆರೆಯುವುದಾಗಿ ತಿಳಿಸಿದ್ದು ಕೇಂದ್ರ ಸರ್ಕಾರವು ಈಗ ಮೈಸೂರಿನಲ್ಲಿರುವ ಟಿ.ವಿ. ಟ್ರಾನ್ಸ್‌ಮಿಟರ್ ಅನ್ನು ೧೦ ಕಿಲೋವಾಟ್‌ಗೆ ಏರಿಸಿ ಇದನ್ನು ಚಾಮುಂಡಿ ಬೆಟ್ಟದ ಮೇಲೆ ಸ್ಥಾಪಿಸಿ ಈಗಿರುವ ೪ ಚಾನಲ್ ಅನ್ನು ೬ ಚಾನಲ್‌ಗೆ ಬದಲಾಯಿಸಿ ಮೈಸೂರು ನಾಗರೀಕರಿಗೆ ಹಾಗೂ ಜಿಲ್ಲೆಯ ಜನರಿಗೆ ಟಿ.ವಿ. ಪ್ರಸಾರವು ಪೂರ್ಣವಾಗಿ ದೊರಕುವಂತೆ ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರ ಅಭಿಪ್ರಾಯ ಚೆನ್ನಾಗಿದೆ. ನಾನೂ ಕೂಡ ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸುವುದಕ್ಕೆ ಸಿದ್ಧವಾಗಿದ್ದೇನೆ.